85-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 1 ರ

ಮಾದರಿ ಉತ್ತರಗಳು

MODEL ANSWERS

OF S.S.L.C. MODEL QUESTION PAPER - 1 : 2026 - 27

ವಿಷಯ : ಸಮಾಜವಿಜ್ಞಾನ

Subject : SOCIAL SCIENCE

ವಿಷಯ ಸಂಕೇತ : 85-K **Subject Code : 85-K**

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ / ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದು ಮಾತ್ರ ಸರಿಯಾಗಿದೆ ಅಥವಾ ಹೆಚ್ಚು ಸೂಕ್ತವಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಪೂರ್ಣ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. **8x1=8**

1. ಮೊದಲನೇ ಆಂಗ್ಲೋ ಮೈಸೂರು ಯುದ್ಧವನ್ನು ಕೊನೆಗೊಳಿಸಿದ ಒಪ್ಪಂದ

ಉತ್ತರ: D) ಮದ್ರಾಸ್ ಒಪ್ಪಂದ 1

2. 1917ರಲ್ಲಿ ಸಮಾಜವಾದಿ ಕ್ರಾಂತಿಯು ಸಂಭವಿಸಿದ ದೇಶ

ಉತ್ತರ: A) ರಷ್ಯಾ 1

3. ವಿಶ್ವಸಂಸ್ಥೆಯ ಮುಖ್ಯ ಕಛೇರಿ ಇರುವುದು

ಉತ್ತರ: D) ನ್ಯೂಯಾರ್ಕ್‌ನಲ್ಲಿ 1

4. ಅಸ್ಪೃಶ್ಯತಾ ಆಚರಣೆಯನ್ನು ನಿಷೇಧಿಸುವ ನಮ್ಮ ಸಂವಿಧಾನದ ವಿಧಿ

ಉತ್ತರ: C) 17 ನೇ ವಿಧಿ 1

5. ಜ್ಯೋತಿಬಾ ಫುಲೆಯವರು ಅಸ್ಪೃಸ್ಯತಾ ವಿರೋಧಿ ಚಳವಳಿಯನ್ನು ಪ್ರಾರಂಭಿಸಿದ್ದು

ಉತ್ತರ: B) ಮಹಾರಾಷ್ಟ್ರದಲ್ಲಿ 1

6. ಸ್ಥಳೀಯ ಉಷ್ಣಾಂಶ ಮತ್ತು ಪ್ರಚಲನ ಪ್ರವಾಹಗಳಿಂದ ಏಪ್ರಿಲ್–ಮೇ ತಿಂಗಳಲ್ಲಿ ಕರ್ನಾಟಕದಲ್ಲಿ ಉಂಟಾಗುವ ಪರಿಸರಣ ಮಳೆ

ಉತ್ತರ: C) ಕಾಫಿ ತುಂತುರು 1

7. ಇವುಗಳಲ್ಲಿ ಪರೋಕ್ಷ ತೆರಿಗೆಯು

ಉತ್ತರ: B) ಆಮದು ಮತ್ತು ರಫ್ತು ತೆರಿಗೆ 1

8. ಆರ್ಯನ್ ಒಬ್ಬ ವ್ಯಾಪಾರಿಯಾಗಿದ್ದು, ತನ್ನ ವ್ಯಾಪಾರಕ್ಕೆ ಸಂಬಂಧಿಸಿದಂತೆ ಆತನು ಹೊಂದಿರುವ ಬ್ಯಾಂಕ್ ಖಾತೆಯು

ಉತ್ತರ: C) ಚಾಲ್ತಿ ಖಾತೆ 1

II. ಈ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿ. **8x1=8**

9. ಮಹಲ್ವಾರಿ ಪದ್ಧತಿಯಲ್ಲಿ ಮಹಲ್ ಎಂದರೇನು?

ಉತ್ತರ: ಮಹಲ್ವಾರಿ ಪದ್ಧತಿಯಲ್ಲಿ ಮಹಲ್ ಎಂದರೆ ತಾಲ್ಲೂಕು ಎಂದರ್ಥ. 1

10. ಹಿಟ್ಲರನು ಬೂದು ಅಂಗಿದಳ ಎಂಬ ಕ್ರೌರ್ಯಪಡೆಯನ್ನು ಏಕೆ ರಚಿಸಿದ್ದನು?

ಉತ್ತರ: ಗಲಭೆಗಳನ್ನು ಮಾಡಿ ಜನರಲ್ಲಿ ಭೀತಿಯನ್ನು ಹುಟ್ಟಿಸಲು ಹಿಟ್ಲರನು ಬೂದು ಅಂಗಿದಳ ಎಂಬ ಕ್ರೌರ್ಯಪಡೆಯನ್ನು ರಚಿಸಿದ್ದನು. 1

11. ವಿಶ್ವಸಂಸ್ಥೆ ಎಂಬ ಪದವನ್ನು ಯಾರು ರೂಪಿಸಿದರು?

ಉತ್ತರ: ವಿಶ್ವಸಂಸ್ಥೆ ಎಂಬ ಪದವನ್ನು ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ರವರು ರೂಪಿಸಿದರು. 1

12. ಕೈಗಾ ವಿರೋಧಿ ಚಳವಳಿಯ ನೇತೃತ್ವ ವಹಿಸಿದ್ದ ನಾಯಕರನ್ನು ಹೆಸರಿಸಿ.

ಉತ್ತರ: ಡಾ. ಶಿವರಾಮ ಕಾರಂತರು ಕೈಗಾ ವಿರೋಧಿ ಚಳವಳಿಯ ನೇತೃತ್ವವನ್ನು ವಹಿಸಿದ್ದರು. 1

13. ಭಾರತ ಸರ್ಕಾರವು ನವಶೇವಾ ಬಂದರನ್ನು ಏಕೆ ನಿರ್ಮಿಸಿತು?

ಉತ್ತರ: ಮುಂಬೈ ಬಂದರಿನ ಹೆಚ್ಚಿನ ಒತ್ತಡವನ್ನು ನಿವಾರಿಸಲು ಭಾರತ ಸರ್ಕಾರವು ನವಶೇವಾ ಬಂದರನ್ನು ನಿರ್ಮಿಸಿತು. 1

14. ಸಾಫ್ಟವೇರ್ ಟೆಕ್ನಾಲಜಿ ಪಾರ್ಕ್‌ಗಳನ್ನು ಸರ್ಕಾರವು ಸ್ಥಾಪಿಸಿದೆ. ಏಕೆ?

ಉತ್ತರ: ಸಾಫ್ಟ್ ವೇರ್ ಉದ್ಯಮದಬೆಳವಣಿಗೆಯನ್ನು ಪ್ರೋತ್ಸಾಹಿಸಲು

- ಸಾಫ್ಟ್ ವೇರ್ ರಫ್ತನ್ನು ಉತ್ತೇಜಿಸಲು (ಯಾವುದಾದರೂ ಒಂದು ಅಂಶ) 1

15. ವಸತಿಹೀನರಿಗೆ ಮನೆಗಳನ್ನು ನಿರ್ಮಿಸಿಕೊಡಲು ಸರ್ಕಾರವು ಜಾರಿಗೆ ತಂದಿರುವ ಯಾವುದಾದರೂ ಒಂದು ಯೋಜನೆಯನ್ನು ಹೆಸರಿಸಿ.

ಉತ್ತರ: ಪ್ರಧಾನ ಮಂತ್ರಿ ಆವಾಸ್ ಯೋಜನೆ

- ಅಂಬೇಡ್ಕರ್ ವಾಲ್ಮೀಕಿ ವಸತಿ ಯೋಜನೆ
- ಆಶ್ರಯ ಯೋಜನೆ
- ಬಸವ ವಸತಿ ಯೋಜನೆ ಇತ್ಯಾದಿ (ಯಾವುದಾದರೂ ಒಂದು ಅಂಶ) 1

16. ಫ್ರೆಂಚ್ ಭಾಷೆಯ ಯಾವ ಪದದಿಂದ ಉದ್ಯಮಿ ಎಂಬ ಪದವು ಬಂದಿದೆ?

ಉತ್ತರ: ಫ್ರೆಂಚ್ ಭಾಷೆಯ ಎಂಟ್ರಪ್ರೆಂಡೆ ಎಂಬ ಪದದಿಂದ ಉದ್ಯಮಿ ಎಂಬ ಪದವು ಬಂದಿದೆ. 1

III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. **8x1=8**

17. ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

ಉತ್ತರ: ಕೇಂದ್ರ ಸರಕಾರದ 'ಎ' ಮತ್ತು 'ಬಿ' ವೃಂದದ ಹುದ್ದೆಗಳಿಗೆ ನೇಮಕ ಮಾಡಲು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವುದು

- ನೇರ ನೇಮಕಾತಿಗೆ ವ್ಯಕ್ತಿತ್ವ ಪರೀಕ್ಷೆ ನಡೆಸುವುದು
- ಬಡ್ತಿ ಮತ್ತು ವರ್ಗಾವಣೆಗೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಸರಕಾರಕ್ಕೆ ಸಲಹೆ
- ಅಧಿಕಾರಿಗಳ ದುರ್ವರ್ತನೆಯ ಬಗ್ಗೆ ಶಿಸ್ತುಕ್ರಮಕ್ಕೆ ಸರಕಾರಕ್ಕೆ ಸಲಹೆ
- ರಾಷ್ಟ್ರಾಧ್ಯಕ್ಷರ ಸೂಚನೆಯ ಮೇರೆಗೆ ಯಾವುದೇ ವಿಷಯಗಳಿಗೆ ಸರ್ಕಾರಕ್ಕೆ ಸಲಹೆ $4X\frac{1}{2}=2$

ಅಥವಾ

ಆಹಾರ ಮತ್ತು ಕೃಷಿ ಸಂಸ್ಥೆಯ ಉದ್ದೇಶಗಳನ್ನು ವಿವರಿಸಿ.

ಉತ್ತರ: ಕೃಷಿ ಕ್ಷೇತ್ರದ ಅಭಿವೃದ್ಧಿ

- ಪೌಷ್ಟಿಕ ಆಹಾರ ಒದಗಿಸುವಿಕೆ
- ಜಾಗತಿಕ ಜನಸಮುದಾಯವನ್ನು ಹಸಿವಿನಿಂದ ಮುಕ್ತಗೊಳಿಸುವುದು
- ಗ್ರಾಮಾಂತರ ಪ್ರದೇಶಗಳ ಜನರ ಜೀವನ ಮಟ್ಟದ ಸುಧಾರಣೆ $4X\frac{1}{2}=2$

18. ಬಾಲ್ಯವಿವಾಹಕ್ಕೆ ಕಾರಣಗಳೇನು?

ಉತ್ತರ: ಲಿಂಗ ತಾರತಮ್ಯ

- ಶಿಕ್ಷಣ ಇಲ್ಲದಿರುವಿಕೆ
- ಬಾಲಕಾರ್ಮಿಕತೆ
- ಮಕ್ಕಳ ಸಾಗಾಣಿಕೆ ಮತ್ತು ಮಾರಾಟ
- ಕಾನೂನಿನ ಕನಿಷ್ಠ ಮಟ್ಟದ ಅನುಷ್ಠಾನ ಮತ್ತು ಬಳಕೆಯ ಕೊರತೆ
- ಸಾರ್ವಜನಿಕರ ಅಸಹಕಾರ
- ಮಕ್ಕಳ ಹಕ್ಕುಗಳ ದೋಷಪೂರಿತ ಅನುಷ್ಠಾನ
- ಬಾಲ್ಯವಿವಾಹದಲ್ಲಿ ನಂಬಿಕೆ $4X\frac{1}{2}=2$

ಅಥವಾ

ಸಾಮಾಜಿಕ ಸ್ತರ ವಿನ್ಯಾಸವು ಹೇಗೆ ರೂಪುಗೊಂಡಿದೆ?

ಉತ್ತರ: ಆಧಾಯ

- ಶಿಕ್ಷಣ
- ಜಾತಿ
- ಬಣ್ಣ
- ಲಿಂಗ

- ಉದ್ಯೋಗ
- ಬುದ್ಧಿವಂತಿಕೆ ಮುಂತಾದವುಗಳ ಆಧಾರದ ಮೇಲೆ ರೂಪುಗೊಂಡಿದೆ. $4X\frac{1}{2}=2$

19. ಸಹಾಯಕ ಸೈನ್ಯ ಪದ್ಧತಿಯ ಮೂಲಕ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರ್ಪಡೆಗೊಂಡ ಭಾರತೀಯ ಸಂಸ್ಥಾನಗಳನ್ನು ಪಟ್ಟಿಮಾಡಿ.

ಉತ್ತರ: ಹೈದರಾಬಾದ್

- ಮೈಸೂರು
- ಔದ್
- ತಂಜಾವೂರು
- ಮರಾಠ ಸಂಸ್ಥಾನಗಳು
- ಆರ್ಕಾಟ್
- ಪೂನಾ
- ಬಿರಾರ್
- ಗ್ವಾಲಿಯರ್ ಇತ್ಯಾದಿ. $4X\frac{1}{2}=2$

20. ಜುನಾಗಡವು ಭಾರತ ಒಕ್ಕೂಟಕ್ಕೆ ಹೇಗೆ ಸೇರ್ಪಡೆಯಾಯಿತು?

ಉತ್ತರ: ಜುನಾಗಡದ ನವಾಬನು ತನ್ನ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಚಿಸಿದ್ದನು

- ಪ್ರಜೆಗಳಿಂದ ತೀವ್ರ ಪ್ರತಿರೋಧ
- ನವಾಬನು ರಾಜ್ಯ ಬಿಟ್ಟು ಪಲಾಯನ ಮಾಡಿದನು
- ಜುನಾಗಡದ ದಿವಾನರಿಂದ ಭಾರತಕ್ಕೆ ಸೇರಿಸಲು ಮನವಿ
- ಭಾರತ ಸರ್ಕಾರದಿಂದ ಸೈನ್ಯ ರವಾನೆ
- ಜುನಾಗಡ 1949ರಲ್ಲಿ ಭಾರತ ಒಕ್ಕೂಟಕ್ಕೆ ಸೇರ್ಪಡೆ $4X\frac{1}{2}=2$

21. ಹಿರಾಕುಡ್ ನದಿ ಕಣಿವೆ ಯೋಜನೆಯನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

ಉತ್ತರ: ಒಡಿಶಾದ ಸಂಬಲ್ಪುರ್ ಸಮೀಪ ನಿರ್ಮಾಣ

- ಮಹಾನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಾಣ
- ಒಡಿಶಾದ ಕಣ್ಣೀರಿನ ನದಿ ಎಂದು ಕರೆಯಲ್ಪಡುತ್ತಿತ್ತು
- ಭಾರತದ ಅತ್ಯಂತ ಉದ್ದವಾದ ಅಣೆಕಟ್ಟು
- 4801 ಮೀಟರ್ ಉದ್ದ
- 2.54 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ
- ಒಡಿಶಾ, ಬಿಹಾರ್ , ಛತ್ತೀಸ್‌ಗಡ ರಾಜ್ಯಗಳಿಗೆ ನೀರು ಮತ್ತು ಜಲವಿದ್ಯುಚ್ಛಕ್ತಿ $4X\frac{1}{2}=2$

22. ಕಬ್ಬು ಮತ್ತು ಹೊಗೆಸೊಪ್ಪುಗಳೆರಡು ವಾಣಿಜ್ಯ ಬೆಳೆಗಳಾಗಿದ್ದರೂ ಅವುಗಳ ಬೇಸಾಯಕ್ಕೆ ಬೇಕಾಗುವ ಭೌಗೋಳಿಕ ಅಂಶಗಳಲ್ಲಿ ವ್ಯತ್ಯಾಸವಿದೆ. ಸಮರ್ಥಿಸಿ.

ಉತ್ತರ:

ಕಬ್ಬು	ಹೊಗೆಸೊಪ್ಪು
• 21^0 to 26^0 ಸೆಲ್ಸಿಯಸ್ ಉಷ್ಣಾಂಶ	• 21^0 to 27^0 ಸೆಲ್ಸಿಯಸ್ ಉಷ್ಣಾಂಶ
• 100 ರಿಂದ 150 ಸೆಂ.ಮಿ. ವಾರ್ಷಿಕ ಮಳೆ	• ಸರಾಸರಿ 50 ಸೆಂ.ಮಿ. ಮಳೆ
• ಮೆಕ್ಕಲು ಮತ್ತು ಕಪ್ಪು ಮಣ್ಣು	• ಮರಳು ಮಿಶ್ರಿತ ಮಣ್ಣು
• ಹೆಚ್ಚು ಉಷ್ಣಾಂಶ ಮತ್ತು ತೇವಾಂಶ ಹೊಂದಿರುವ ವಾಯುಗುಣ	• ಉಷ್ಣವಲಯದ ಬೆಳೆ

(ಯಾವುದಾದರೂ 2 ವ್ಯತ್ಯಾಸಗಳು) 2x1=2

23. ನೀತಿ ಆಯೋಗ(NITI AYOG)ದ ಉದ್ದೇಶಗಳಾವುವು?

ಉತ್ತರ: ಭಾರತ ಸರಕಾರದ ಅತ್ಯುನ್ನತ ಸಾರ್ವಜನಿಕ ನೀತಿ ಚಿಂತಕರ ಚಾವಡಿಯಾಗಿ ಕಾರ್ಯನಿರ್ವಹಿಸುವುದು

- ಆರ್ಥಿಕ ಅಭಿವೃದ್ಧಿಯನ್ನು ವೇಗಗೊಳಿಸುವ ಕಾರ್ಯದ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುವುದು
- ಕೆಳಮಟ್ಟದಿಂದ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದು
- ಆರ್ಥಿಕ ನೀತಿ ನಿರೂಪಣೆಯಲ್ಲಿ ಭಾರತದ ರಾಜ್ಯ ಸರಕಾರಗಳ ಒಳಗೊಳ್ಳುವಿಕೆ
- ಆ ಸಹಕಾರಿ ಒಕ್ಕೂಟವನ್ನು ಉತ್ತೇಜಿಸುವುದು $4X\frac{1}{2}=2$

24. ಜಾನ್ ಎಫ್. ಕೆನಡಿಯವರು ಅಮೆರಿಕ ಸಂಯುಕ್ತ ಸಂಸ್ಥಾನದ ಗ್ರಾಹಕರಿಗೆ ನೀಡಿರುವ ಹಕ್ಕುಗಳನ್ನು ವಿವರಿಸಿ.

ಉತ್ತರ: ಸಂರಕ್ಷತೆಯ ಹಕ್ಕು

- ಆಯ್ಕೆಯ ಹಕ್ಕು
- ಮಾಹಿತಿ ಪಡೆಯುವ ಹಕ್ಕು
- ಆಲಿಸುವ ಹಕ್ಕು $4X\frac{1}{2}=2$

IV. ಈ ಪ್ರಶ್ನೆಗಳಿಗೆ ಆರು ವಾಕ್ಯ/ಅಂಶಗಳಲ್ಲಿ ಉತ್ತರಿಸಿ. **9x3=27**

25. ಡಚ್ಚರ ವಿರುದ್ಧದ ಮಾರ್ತಾಂಡವರ್ಮನ ಹೋರಾಟವನ್ನು ವಿವರಿಸಿ.

ಉತ್ತರ: ವೈನಾಡ್ ಸಂಸ್ಥಾನವನ್ನು ಆಳಿದನು

- ಡಚ್ಚರಿಂದ ತನ್ನ ಸಂಸ್ಥಾನವನ್ನು ರಕ್ಷಿಸಿದನು
- ತಿರುವನಂತಪುರಕ್ಕೆ ರಾಜಧಾನಿಯ ಸ್ಥಳಾಂತರ
- ಸುತ್ತಲಿನ ಸಂಸ್ಥಾನಗಳು ಡಚ್ಚರನ್ನು ವಿರೋಧಿಸುವಂತೆ ಮಾಡಿದನು
- ರಾಜಧಾನಿಯನ್ನು ತಿರುವನಂತಪುರಕ್ಕೆ ಸ್ಥಳಾಂತರಿಸಿದನು
- ಕರಿಮೆಣಸಿನ ವ್ಯಾಪಾರದಲ್ಲಿ ಹಿಡಿತ ಸಾಧಿಸುತ್ತಿದ್ದ ಡಚ್ಚರನ್ನು ತಡೆಗಟ್ಟಿದನು
- ಕಾಯಂ ಕುಳಂ, ಕೊಚ್ಚಿ, ಪುರಕ್ಕಾಡ್ ಮತ್ತು ವಡಕ್ಕುಂಕುರ್ಗಳು ಡಚ್ಚರೊಡನೆ ಸೇರಿ ತಿರುವಾಂಕೂರಿನ ಮೇಲೆ ದಾಳಿ
- ಆಗ ಡಚ್ ಕೂಟವನ್ನು ಸೋಲಿಸಿದನು
- ನೆಡುಮಂಗಡ ಮತ್ತು ಕೊಟ್ಟಾರಕರ ವ್ಯಾಪಾರಿ ಕೇಂದ್ರಗಳನ್ನು ವಶಪಡಿಸಿಕೊಂಡನು
- 1741ರಲ್ಲಿ ಡಚ್ಚರು ತಿರುವಾಂಕೂರಿನ ಮೇಲೆ ಯುದ್ಧ ಸಾರಿದರು
- ಮಾರ್ತಾಂಡವರ್ಮ ಡಚ್ಚರನ್ನು ಹಿಮ್ಮೆಟ್ಟಿಸಿದನು
- 1753ರ ಒಪ್ಪಂದದ ಪ್ರಕಾರ ಡಚ್ಚರು ಸಂಪೂರ್ಣ ಅಧಿಕಾರವನ್ನು ಒಪ್ಪಿಸಿ ಶರಣಾದರು. $6X\frac{1}{2}=3$

ಅಥವಾ

ಬ್ರಿಟಿಷ್ ಶಿಕ್ಷಣ ಪದ್ಧತಿಯಿಂದ ಭಾರತದಲ್ಲಾದ ಪರಿಣಾಮಗಳನ್ನು ವಿವರಿಸಿ.

ಉತ್ತರ: ಆಧುನಿಕತೆ, ಜಾತ್ಯತೀತತೆ, ಪ್ರಜಾಪ್ರಭುತ್ವ ಹಾಗೂ ವೈಜ್ಞಾನಿಕ ಆಲೋಚನಾ ಕ್ರಮದ ಬೆಳವಣಿಗೆ

- ರಾಷ್ಟ್ರೀಯವಾದಿ ದೃಷ್ಟಿಕೋನದ ಬೆಳವಣಿಗೆ
- ಸ್ಥಳೀಯ ಭಾಷೆಗಳು ಮತ್ತು ಸಾಹಿತ್ಯ ರಚನೆಗೆ ಪ್ರೋತ್ಸಾಹ
- ವೃತ್ತ ಪತ್ರಿಕೆಗಳು ಹುಟ್ಟಿ ಬೆಳೆಯಲಾರಂಭಿಸಿದವು
- ವೃತ್ತ ಪತ್ರಿಕೆಗಳು ಸರ್ಕಾರದ ನೀತಿಗಳನ್ನು ವಿಮರ್ಶಿಸಿದವು
- ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು ಹುಟ್ಟಿಕೊಂಡವು
- ಭಾರತೀಯ ವಿದ್ಯಾವಂತರ ಆಲೋಚನಾ ಕ್ರಮದಲ್ಲಿ ನಾವಿನ್ಯತೆ ಉಂಟಾಯಿತು
- ಭಾರತೀಯ ಸಾಂಸ್ಕೃತಿಕ ಪರಂಪರೆಗಳ ಅರಿವು ಉಂಟಾಯಿತು
- ಪ್ರಪಂಚದ ಸ್ವಾತಂತ್ರ್ಯ ಹೋರಾಟಗಳಿಂದ ಭಾರತೀಯರು ಪ್ರಭಾವಿತರಾದರು $6X\frac{1}{2}=3$

26. ಅರಣ್ಯಗಳ ಸಂರಕ್ಷಣಾ ವಿಧಾನಗಳಾವುವು?

ಉತ್ತರ: ಕಾಡ್ಗಿಚ್ಚು ಉಂಟುಮಾಡುವ ಘರ್ಷಿತ ಮರಗಳನ್ನು ತೆಗೆಯುವುದು

- ಅರಣ್ಯದ ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು
- ಸಸಿಗಳನ್ನು ನೆಡುವುದು
- ಬೀಜಗಳನ್ನು ಹರಡುವುದು
- ಕಾನೂನು ಬಾಹಿರವಾಗಿ ಮರ ಕಡಿಯುವುದನ್ನು ನಿಯಂತ್ರಿಸುವುದು
- ಅರಣ್ಯಗಳಲ್ಲಿ ಸಾಕುಪ್ರಾಣಿಗಳ ಮೇಯಿಸುವಿಕೆಯನ್ನು ನಿಯಂತ್ರಿಸುವುದು
- ಸಾರ್ವಜನಿಕರನ್ನು ಗಿಡ ನೆಡಲು ಪ್ರೋತ್ಸಾಹಿಸುವುದು
- ಜನರಿಗೆ ತಿಳುವಳಿಕೆ ನೀಡಿ ಅರಣ್ಯ ರಕ್ಷಣೆಗೆ ಪ್ರೇರೇಪಿಸುವುದು
- ಸಾಮಾಜಿಕ ಅರಣ್ಯ ಯೋಜನೆಯನ್ನು ತ್ವರಿತವಾಗಿ ಕಾರ್ಯಗತಗೊಳಿಸುವುದು $6X\frac{1}{2}=3$

ಅಥವಾ

ಗ್ಲೋಬಲ್ ಪೊಜಿಶನಿಂಗ್ ಸಿಸ್ಟಮ್ ತಂತ್ರಜ್ಞಾನದ ಉಪಯೋಗಗಳಾವುವು?

ಉತ್ತರ: ಪ್ರಾಕೃತಿಕ ವಿಕೋಪಗಳ ಸ್ಪಷ್ಟ ಭೌಗೋಳಿಕ ಸ್ಥಾನವನ್ನು ಗುರುತಿಸಿ ಪರಿಹಾರ ಕೈಗೊಳ್ಳಲು ಉಪಯುಕ್ತ

- ಅರಣ್ಯ ಹಾಗೂ ಪರ್ವತ ಚಾರಣ ಮಾಡುವವರಿಗೆ ಮಾರ್ಗ ತಿಳಿಯಲು ಉಪಯುಕ್ತ
- ಸಾರಿಗೆ ನಿರ್ವಹಣೆಯಲ್ಲಿಯೂ ಇದರ ಬಳಕೆ ಹೆಚ್ಚಾಗಿದೆ
- ಸೈನಿಕರು, ವೈಮಾನಿಕರು, ಮೀನುಗಾರರು ಹಾಗೂ ನಾವಿಕರು ಸರಿಯಾದ ಮಾರ್ಗವನ್ನು ಅನುಸರಿಸಲು ಅಗತ್ಯ ಮಾಹಿತಿ ನೀಡುವುದು
- ನಗರಗಳಲ್ಲಿ ಮನೆಬಾಗಿಲಿಗೆ ಸೇವೆ ಕೊಡುವ ಸಂಸ್ಥೆಗಳಿಗೆ ಜೀವಾಳವಾಗಿದೆ
- ಗೂಗಲ್ ಮ್ಯಾಪ್ ನಂತಹ ವ್ಯವಸ್ಥೆಗಳು ಜಿ.ಪಿ.ಎಸ್ ವ್ಯವಸ್ಥೆಯನ್ನು ಬಳಸಿ ದಾರಿ ತೋರಿಸುತ್ತವೆ $6X\frac{1}{2}=3$

27. ಮಹಿಳೆಯರ ಬಲವರ್ಧನೆಯಲ್ಲಿ ಮಹಿಳಾ ಸ್ವ–ಸಹಾಯ ಸಂಘಗಳ ಪಾತ್ರವನ್ನು ವಿವರಿಸಿ.

ಉತ್ತರ: ಮಹಿಳೆಯರಿಗೆ ಆರ್ಥಿಕ ಸಾಕ್ಷರತೆಯನ್ನು ಕೊಡುತ್ತಿದೆ

- ಮಹಿಳೆಯರಲ್ಲಿ ಜಾಗೃತಿಯನ್ನು ಮೂಡಿಸುತ್ತಿದೆ
- ಸ್ವ ಉದ್ಯೋಗದಲ್ಲಿ ತರಬೇತಿಯನ್ನು ನೀಡುತ್ತಿದೆ
- ಹಣದ ಉಳಿತಾಯಕ್ಕೆ ಮಾರ್ಗದರ್ಶನ ಮಾಡುತ್ತದೆ
- ಮಹಿಳಾ ದೌರ್ಜನ್ಯದ ವಿರುದ್ಧ ಜಾಗೃತಿಯನ್ನು ಮೂಡಿಸುತ್ತಿದೆ
- ಸಾಮಾಜಿಕ ಪಿಡುಗುಗಳಾದ ಮದ್ಯಪಾನ, ಜೂಜು, ಬಾಲ್ಯವಿವಾಹ, ವರದಕ್ಷಿಣೆಗಳಿಂದ ಮುಕ್ತಿಗೆ ಸಹಾಯಕ
- ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸುತ್ತಿದೆ
- ಗೃಹ ಉತ್ಪನ್ನ ತಯಾರಿಕೆ ಮತ್ತು ಮಾರಾಟದ ತರಬೇತಿಯನ್ನು ಕೊಡುತ್ತದೆ $6X\frac{1}{2}=3$

ಅಥವಾ

ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ.

ಉತ್ತರ: ವಿತೀಯ ನೀತಿಯ ಮೂಲಕ ಸಾರ್ವಜನಿಕ ಹಣಕಾಸಿನ ನಿರ್ವಹಣೆ

- ದೇಶದ ಅಭಿವೃದ್ಧಿಯನ್ನು ಬಿಂಬಿಸುತ್ತದೆ
- ದೇಶದ ಸಂಪನ್ಮೂಲಗಳನ್ನು ಉತ್ಪಾದನಾಂಗಗಳಲ್ಲಿ ಸಮರ್ಪಕವಾಗಿ ಹಂಚುತ್ತದೆ
- ಉತ್ಪಾದನೆಯನ್ನು ಗರಿಷ್ಟೀಕರಣ ಗೊಳಿಸುತ್ತದೆ
- ದೇಶದಲ್ಲಿ ಶಾಂತಿಯನ್ನು ತರುವಂತೆ ಮಾಡುತ್ತದೆ
- ಪ್ರಜೆಗಳ ಕಲ್ಯಾಣವನ್ನು ಮಾಡುತ್ತದೆ
- ಬಂಡವಾಳ ಹೆಚ್ಚುವಂತೆ ಮಾಡುತ್ತದೆ
- ನಿರುದ್ಯೋಗ ಮತ್ತು ಬಡತನ ನಿವಾರಣೆಗೆ ಕ್ರಮ
- ಹಣಕಾಸು ಏರಿಳಿತಗಳ ನಿಯಂತ್ರಣ
- ಸರಕುಗಳ ಬೆಲೆ ನಿಯಂತ್ರಣ
- ಸಮತೋಲಿತ ಅಭಿವೃದ್ಧಿಯನ್ನು ಖಾತರಿಪಡಿಸುತ್ತದೆ $6X\frac{1}{2}=3$

28. ಬ್ಯಾಂಕುಗಳು ನಿರ್ವಹಿಸುವ ಕಾರ್ಯಗಳಾವುವು?

ಉತ್ತರ: ಸಾರ್ವಜನಿಕರಿಂದ ಠೇವಣಿ ಅಂಗೀಕರಿಸುವುದು

- ಸಾಲಗಳನ್ನು ಕೊಡುವುದು
- ಹಣವನ್ನು ವರ್ಗಾಯಿಸುವುದು
- ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು
- ಖರ್ಚು ಕಾರ್ಡು ಮತ್ತು ಜಮಾ ಕಾರ್ಡು ಕೊಡುವುದು
- ಹಣದ ವಹಿವಾಟನ್ನು ಮಾಡುತ್ತವೆ
- ಹಣದ ಭದ್ರತೆಯನ್ನು ಕಾಪಾಡುತ್ತವೆ
- ಸಹಿಗಳಿಗೆ ಜವಾಬ್ದಾರಿ ಹಾಕುವುದು
- ಸಾಲಪತ್ರಗಳನ್ನು ಮತ್ತು ಜವಾಬ್ಧಾರಿ ಪತ್ರ ಕೊಡುವುದು
- ಸರ್ಕಾರದ ಹಣಕಾಸಿನ ವ್ಯವಹಾರ ನಿರ್ವಹಿಸುವುದು
- ಭರವಸೆ ಸೇವೆಗಳು
- ಹಣದ ಭದ್ರತೆ ಕಾಪಾಡುವುದು
- ಹಣದ ಪಾವತಿಗಳನ್ನು ಮಾಡಲು ಸಹಾಯ ಮಾಡುತ್ತದೆ

- ಹಣ ವಸೂಲು ಮಾಡಲು ಸಹಾಯ ಮಾಡುತ್ತದೆ
- ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯವಾಗುತ್ತದೆ $6X\frac{1}{2}=3$

ಅಥವಾ

ಉದ್ಯಮಿಗಳ ಗುಣಲಕ್ಷಣಗಳಾವುವು?

ಉತ್ತರ: ಸೃಜನಾತ್ಮಕತೆ

- ಕ್ರಿಯಾತ್ಮಕತೆ
- ನಾಯಕತ್ವ
- ತಂಡವನ್ನು ಕಟ್ಟುವುದು
- ಸಮಸ್ಯೆಯ ಪರಿಹಾರ
- ನಷ್ಟ ಪರಿಹಾರಕ್ಕೆ ಸಿದ್ಧ
- ವಚನ ಬದ್ಧತೆ
- ಗುರಿ ಮುಟ್ಟುವಿಕೆ
- ಆತ್ಮವಿಶ್ವಾಸ
- ನಿರ್ಧಾರಗಳನ್ನು ಕೈಗೆತ್ತಿಕೊಳ್ಳುವುದು
- ಹೊಸ ಪದ್ದತಿಯನ್ನು ರೂಢಿಗೆ ತರುವುದು $6X\frac{1}{2}=3$

29. ಬ್ರಹ್ಮಸಮಾಜದ ಉದ್ದೇಶಗಳನ್ನು ವಿಶ್ಲೇಷಿಸಿ.

ಉತ್ತರ: ಹಿಂದೂ ಧರ್ಮದ ಆಚಾರ ವಿಚಾರಗಳ ಸುಧಾರಣೆಗೆ ಯತ್ನಿಸಿತು

- ವಿಗ್ರಹಾರಾಧನೆ ವಿರೋಧಿಸಿತು
- ಏಕದೇವತಾ ಆರಾಧನೆಯನ್ನು ಪ್ರೋತ್ಸಾಹಿಸಿತು
- ಯಜ್ಞಯಾಗಾದಿಗಳನ್ನು ಖಂಡಿಸಿತು
- ಬಹುದೇವತಾ ಆರಾಧನೆ ವಿರೋಧಿಸಿತು
- ಸತಿ ಪದ್ಧತಿಗೆ ವಿರೋಧ
- ವಿಜ್ಞಾನ ಮತ್ತು ಇಂಗ್ಲಿಷ್ ಶಿಕ್ಷಣಕ್ಕೆ ಮಹತ್ವ
- ಭಾರತೀಯರಲ್ಲಿ ರಾಷ್ಟ್ರಪ್ರಜ್ಞೆ ಜಾಗೃತಗೊಳಿಸಲು ಸಹಾಯ $6X\frac{1}{2}=3$

30. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆರ್ಥಿಕ ಕಾರಣಗಳಾವುವು?

ಉತ್ತರ: ಕರಕುಶಲತೆ ಮತ್ತು ದೇಶೀಯ ಕೈಗಾರಿಕೆಗಳು ಕ್ಷೀಣಿಸಿದವು

- ಭಾರತದ ಕರಕುಶಲಗಾರರು ನಿರುದ್ಯೋಗಿಗಳಾದರು
- ಜವಳಿ ಮತ್ತು ಉಣ್ಣೆ ಕೈಗಾರಿಕೆಗಳು ರೋಗಗ್ರಸ್ಥವಾದವು
- ಗೃಹಕೈಗಾರಿಕೆಗಳು ನಷ್ಟ ಅನುಭವಿಸಿ ಶಿಥಿಲಗೊಂಡವು
- ಭಾರತದ ವಸ್ತುಗಳ ಮೇಲೆ ದುಬಾರಿ ಸುಂಕವನ್ನು ಹೇರಿದರು
- ಜಮೀನ್ದಾರನು ಕೃಷಿಕರನ್ನು ಶೋಷಿಸುತ್ತಿದ್ದನು

- ಕೃಷಿಕರು ಆರ್ಥಿಕ ಸಂಕಷ್ಟ ಅನುಭವಿಸಿದರು
- ಇನಾಂ ಆಯೋಗದ ಮೂಲಕ ಇನಾಂ ಭೂಮಿ ಹಿಂಪಡೆಯಲಾಯಿತು $6X\frac{1}{2}=3$

31. ಭಾರತದ ವಿದೇಶಾಂಗ ನೀತಿಯ ಮೂಲತತ್ವಗಳನ್ನು ವಿವರಿಸಿ.

ಉತ್ತರ: ವಸಾಹತುಶಾಹಿತ್ವಕ್ಕೆ ವಿರೋಧ

- ಸಾಮ್ರಾಜ್ಯಶಾಹಿತ್ವಕ್ಕೆ ವಿರೋಧ
- ವರ್ಣಭೇಧ ನೀತಿಗೆ ವಿರೋಧ
- ಅಲಿಪ್ತ ನೀತಿ
- ಆಫ್ರಿಕಾ ಮತ್ತು ಏಷ್ಯಾದ ಪ್ರಗತಿಗೆ ಪ್ರಥಮ ಆದ್ಯತೆ
- ನಿಶ್ಯಸ್ತ್ರೀಕರಣಕ್ಕೆ ಬೆಂಬಲ
- ವಿಶ್ವಸಂಸ್ಥೆ ಮತ್ತು ವಿಶ್ವ ಶಾಂತಿಗೆ ಬೆಂಬಲ $6X\frac{1}{2}=3$

32. ನಿರುದ್ಯೋಗವು ಹೇಗೆ ಒಂದು ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ?

ಉತ್ತರ: ನಿರುದ್ಯೋಗವು

- ಬಡತನ
- ಅನಾರೋಗ್ಯ
- ಭ್ರಷ್ಟಾಚಾರ
- ಕೌಟುಂಬಿಕ ವಿಘಟನೆ
- ಮೋಸ
- ವಂಚನೆ
- ಕಳ್ಳತನ
- ವ್ಯಭಿಚಾರಗಳಿಗೆ ಕಾರಣವಾಗುತ್ತದೆ. ಹಾಗಾಗಿ ಇದೊಂದು ಗಂಭೀರ ಸಾಮಾಜಿಕ ಸಮಸ್ಯೆಯಾಗಿದೆ. $6X\frac{1}{2}=3$

33. ಚಂಡಮಾರುತದ ಪರಿಣಾಮಗಳು ಯಾವುವು?

ಉತ್ತರ: ಜನಜೀವನ ಮಾರ್ಪಾಡು ಹೊಂದುವುದು

- ಅಪಾರ ಸಾವು ನೋವು ಉಂಟಾಗುತ್ತದೆ
- ಒಳನಾಡಿನ ಜಲರಾಶಿಗಳು ಲವಣಯುಕ್ತವಾಗುತ್ತವೆ
- ಬೆಳೆಗಳು ಸಂಪೂರ್ಣ ನಾಶವಾಗುತ್ತವೆ
- ಸಾರಿಗೆ ಸಂಪರ್ಕ, ವಿದ್ಯುತ್ ಸೌಕರ್ಯ, ಜನಜೀವನ ಅಸ್ತವ್ಯಸ್ತವಾಗುತ್ತದೆ
- ಸಾಂಕ್ರಾಮಿಕ ರೋಗಗಳು ಹರಡುತ್ತವೆ $6X\frac{1}{2}=3$

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯ/ಅಂಶಗಳಲ್ಲಿ ಉತ್ತರಿಸಿ. **4x4=16**

34. ಕಿತ್ತೂರಿನ ಸ್ವಾತಂತ್ರ್ಯ ಹೋರಾಟದಲ್ಲಿ ಸಂಗೊಳ್ಳಿರಾಯಣ್ಣನ ಪಾತ್ರವನ್ನು ವಿಶ್ಲೇಷಿಸಿ.

ಉತ್ತರ: ಕಿತ್ತೂರಿನ ಸ್ವಾತಂತ್ರಕ್ಕಾಗಿ ಹೋರಾಡುವುದು ತನ್ನ ಆದ್ಯಕರ್ತವ್ಯವೆಂದು ಭಾವಿಸಿದ್ದನು

- ಚೆನ್ನಮ್ಮನ ಜೊತೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದನು
- ಸೈನಿಕರನ್ನು ಸಂಘಟಿಸಿದನು

- ಗುಪ್ತ ಸಭೆಗಳನ್ನು ನಡೆಸಿದನು
- 500 ಜನರ ಸೈನ್ಯವನ್ನು ಸಂಘಟಿಸಿದನು
- ಗೆರಿಲ್ಲಾ ಯುದ್ಧ ತಂತ್ರವನ್ನು ಅನುಸರಿಸಿದನು
- ತಾಲೂಕು ಕಚೇರಿಗಳು ಮತ್ತು ಖಜಾನೆಗಳನ್ನು ಲೂಟಿ ಮಾಡಿದನು
- ನಂದಗಡ, ಖಾನಾಪುರ ಮತ್ತು ಸಂಪಗಾವಿಗಳಲ್ಲಿ ಕಾರ್ಯಾಚರಣೆ
- ಬ್ರಿಟಿಷರಿಗೆ ಸಹಕರಿಸುತ್ತಿದ್ದ ಹಳ್ಳಿಗರ ಮೇಲೆ ಆಕ್ರೋಶ
- ಬ್ರಿಟಿಷರು ರಾಯಣ್ಣನನ್ನು ಸೆರೆಹಿಡಿಯಲು ದೇಸಾಯಿಗಳನ್ನು ಪ್ರೋತ್ಸಾಹಿಸಿದರು
- ಸಂಚಿಗೆ ಬಲಿಯಾದ ರಾಯಣ್ಣನನ್ನು ಬ್ರಿಟಿಷರು ಬಂಧಿಸಿದರು
- ರಾಯಣ್ಣನನ್ನು ನಂದಗಡದಲ್ಲಿ ಗಲ್ಲಿಗೇರಿಸಲಾಯಿತು $8X\frac{1}{2}=4$

ಅಥವಾ

ಭಾರತೀಯ ಸಮಾಜವನ್ನು ಸುಧಾರಿಸುವಲ್ಲಿ ದಯಾನಂದ ಸರಸ್ವತಿಯವರ ಪಾತ್ರವನ್ನು ವಿಶ್ಲೇಷಿಸಿ.

ಉತ್ತರ: ಆರ್ಯ ಸಮಾಜವನ್ನು ಸ್ಥಾಪಿಸಿದರು

- ವೇದಗಳು ಸತ್ಯ ಮತ್ತು ಜ್ಞಾನದ ಮೂಲವೆಂದರು
- 'ವೇದಗಳಿಗೆ ಹಿಂದಿರುಗಿ' ಎಂದು ಘೋಷಿಸಿದರು
- ವಿಗ್ರಹಾರಾಧನೆ, ಜಾತಿಪದ್ಧತಿಯನ್ನು ಖಂಡಿಸಿದರು
- ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು
- ಸ್ವದೇಶಿ ವಸ್ತುಗಳ ಬಳಕೆಗೆ ಕರೆ ನೀಡಿದರು
- 'ಸತ್ಯಾರ್ಥ ಪ್ರಕಾಶ' ಕೃತಿ ರಚಿಸಿದರು
- 'ಶುದ್ಧಿ ಚಳುವಳಿ' ಆರಂಭಿಸಿದರು
- "ಭಾರತೀಯರಿಗೇ ಭಾರತ" ಎಂದು ಘೋಷಿಸಿದರು $8X\frac{1}{2}=4$

35. ಕಪ್ಪು ಮಣ್ಣು, ಕೆಂಪು ಮಣ್ಣಿಗಿಂತ ಹೇಗೆ ಭಿನ್ನವಾಗಿದೆ?

ಉತ್ತರ:

ಕಪ್ಪು ಮಣ್ಣು	ಕೆಂಪು ಮಣ್ಣು
• ಕಪ್ಪು ಬಣ್ಣವನ್ನು ಹೊಂದಿದೆ • ಅಗ್ನಿಶಿಲೆಗಳ ಸವೆತದಿಂದಾಗಿದೆ • ಫಲವತ್ತಾದುದು • ಡೆಕ್ಕನ್ ಟ್ರಾಪ್ ಪ್ರದೇಶದಲ್ಲಿ ಹರಡಿದೆ • ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಆಂಧ್ರಪ್ರದೇಶದ ಪಶ್ಚಿಮ ಭಾಗ ಮತ್ತು ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತದೆ • ಹತ್ತಿ, ಜೋಳ, ಗೋಧಿ, ಈರುಳ್ಳಿ, ಮೆಣಸಿನಕಾಯಿ ಹೊಗೆಸೊಪ್ಪು ಇತ್ಯಾದಿ ಬೆಳೆ ಬೆಳೆಯಬಹುದು	• ಕೆಂಪು ಬಣ್ಣವನ್ನು ಹೊಂದಿದೆ • ಗ್ರಾನೈಟ್ ಮತ್ತು ನೀಸ್ ಶಿಲೆಗಳ ಸವೆತದಿಂದಾಗಿದೆ • ಕಪ್ಪು ಮಣ್ಣಿಗೆ ಹೋಲಿಸಿದರೆ ಫಲವತ್ತತೆ ಕಡಿಮೆ • ಪರ್ಯಾಯ ಪ್ರಸ್ಥಭೂಮಿಯಲ್ಲಿ ವಿಸ್ತಾರವಾಗಿ ಹರಡಿದೆ • ಕನ್ಯಾಕುಮಾರಿಯಿಂದ ಝಾನ್ಸಿಯವರೆಗೆ ಮತ್ತು ಕಛ್ ನಿಂದ ರಾಜಮಹಲ್ ಬೆಟ್ಟಗಳವರೆಗೆ ಹರಡಿದೆ • ರಾಗಿ, ಹೊಗೆಸೊಪ್ಪು, ಎಣ್ಣೆಬೆಳೆಗಳನ್ನು ಬೆಳೆಯಬಹುದು

(ಯಾವುದಾದರೂ 4 ವ್ಯತ್ಯಾಸಗಳು) 4x1=4

ಅಥವಾ

ಭಾರತದಲ್ಲಿ ಕೈಗಾರಿಕೆಗಳು ಕೆಲವೇ ಪ್ರದೇಶಗಳಲ್ಲಿ ಮಾತ್ರ ಸ್ಥಾನೀಕರಣಗೊಂಡಿವೆ. ಏಕೆ?

ಉತ್ತರ: ಕಚ್ಚಾವಸ್ತುಗಳು

- ಶಕ್ತಿ ಸಂಪನ್ಮೂಲಗಳು
- ಮಾರುಕಟ್ಟೆ
- ಸಂಚಾರ ಸೌಲಭ್ಯ
- ಕಾರ್ಮಿಕರ ಪೂರೈಕೆ
- ಬಂದರುಗಳ ಸೌಲಭ್ಯ
- ಕಡಿಮೆ ದರದ ಭೂಮಿ ದೊರೆಯುವಿಕೆ
- ತಾಂತ್ರಿಕತೆ
- ಸರ್ಕಾರದ ನೀತಿ ನಿಯಮಗಳು ಕೆಲವೇ ಪ್ರದೇಶಗಳಲ್ಲಿ ಮಾತ್ರ ಲಭ್ಯವಿರುವುದರಿಂದ ಭಾರತದಲ್ಲಿ ಕೈಗಾರಿಕೆಗಳು ಕೆಲವೇ ಪ್ರದೇಶಗಳಲ್ಲಿ ಮಾತ್ರ ಸ್ಥಾನೀಕರಣಗೊಂಡಿವೆ. $8X\frac{1}{2}=4$

36. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸರ ಹೋರಾಟವು ಒಂದು ಪ್ರಮುಖ ಮೈಲುಗಲ್ಲಾಗಿದೆ, ಸಮರ್ಥಿಸಿ.

ಉತ್ತರ: ನೇತಾಜಿ ಎಂದು ಜನಪ್ರಿಯರಾಗಿದ್ದರು

- ಬ್ರಿಟಿಷರ ಪ್ರತಿಷ್ಠಿತ ಹುದ್ದೆಯ ಪ್ರಸ್ತಾಪವನ್ನು ತಿರಸ್ಕರಿಸಿದರು
- ವಿದೇಶದಲ್ಲಿದ್ದ ಭಾರತೀಯರನ್ನು ಸಂಘಟಿಸುವ ಪ್ರಯತ್ನ
- ರೋಂ, ವಿಯೆನ್ನ, ಬರ್ಲಿನ್, ಇಸ್ತಾಂಬುಲ್ ಗಳಿಗೆ ಪ್ರಯಾಣ
- ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆ
- ಹರಿಪುರ ಹಾಗೂ ತ್ರಿಪುರಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದರು
- 'ಫಾರ್ವರ್ಡ್ ಬ್ಲಾಕ್' ಎಂಬ ಹೊಸ ಪಕ್ಷವನ್ನು ಕಟ್ಟಿದರು
- ಆಜಾದ್ ಹಿಂದ್ ರೇಡಿಯೋ ಮೂಲಕ ಭಾಷಣಗಳನ್ನು ಪ್ರಸರಣ ಮಾಡಿದರು
- ಬ್ರಿಟಿಷರಿಂದ ಗ್ರಹಬಂಧನಕ್ಕೀಡಾದರು
- ಗ್ರಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ಪ್ರಯಾಣಿಸಿ ಹಿಟ್ಲರನ ಭೇಟಿಯಾದರು
- ಐ.ಎನ್.ಎ. ಯ ಮುಖಂಡತ್ವವನ್ನು ವಹಿಸಿದರು
- ದೆಹಲಿ ಚಲೋಗೆ ಕರೆಯನ್ನು ನೀಡಿದರು
- 'ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ' ಎಂಬ ಕರೆಯನ್ನಿತ್ತರು
- ಸುಭಾಷರು ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮಡಿದರು $8X\frac{1}{2}=4$

37. ಭಾರತದಲ್ಲಿ ಲಿಂಗ ತಾರತಮ್ಯವನ್ನು ಹೋಗಲಾಡಿಸಲು ತೆಗೆದುಕೊಂಡಿರುವ ಕ್ರಮಗಳನ್ನು ವಿವರಿಸಿ.


ಉತ್ತರ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಪ್ರಾರಂಭ

- ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಉದ್ಯೋಗ ನೇಮಕಾತಿಯಲ್ಲಿ ಮೀಸಲಾತಿ
- ರಾಷ್ಟ್ರೀಯ ಹಾಗೂ ರಾಜ್ಯ ಮಹಿಳಾ ಆಯೋಗಗಳ ಸ್ಥಾಪನೆ

- ಮಹಿಳಾ ಅಭಿವೃದ್ಧಿ ನಿಗಮಗಳ ಸ್ಥಾಪನೆ
- ಸಖಿ ಒನ್ ಸ್ಟಾಪ್ ಸೆಂಟರ್ ಗಳ ಸ್ಥಾಪನೆ
- ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣೆ ಕಾಯ್ದೆಯ ಜಾರಿ (2005)
- ದುಡಿಯುವ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ನಿಷೇಧ ಕಾಯ್ದೆಯ ಜಾರಿ(2013)
- ಕರ್ನಾಟಕದ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 50 ರಷ್ಟು ಸ್ಥಾನಗಳ ಮೀಸಲು
- ಮಹಿಳಾ ಸಹಾಯವಾಣಿ 1091 ಸೌಲಭ್ಯ
- ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33 ರಷ್ಟು ಮೀಸಲಾತಿ.
- ನಾರಿಶಕ್ತಿ ವಂದನಾ ಅಧಿನಿಯಮದ ಅಂಗೀಕಾರ $8X\frac{1}{2}=4$

VI. 38. ಈ ಕೆಳಗಿನವುಗಳಲ್ಲಿ ಯಾವುದಾದರೂ ಐದನ್ನು ನಿಮಗೆ ಕೊಟ್ಟಿರುವ ಭಾರತದ ನಕ್ಷೆಯಲ್ಲಿ ಗುರುತಿಸಿ. **5x1=5**

A. ಇಂದಿರಾ ಪಾಯಿಂಟ್
B. $82^0\ 30^1$ ಪೂರ್ವರೇಖಾಂಶ
C. ಬಾಂಬೆ ಹೈ
D. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ
E. ಬರ್ನಪುರ್
F. ಕೋಸಿ ನದಿ ಕಣಿವೆ ಯೋಜನೆ
G. ಉತ್ಕಲ ತೀರ
H. ಕೊಚ್ಚಿ
I. ಕನ್ಯಾಕುಮಾರಿ
J. ಭದ್ರಾವತಿ



ದೃಷ್ಟಿವಿಕಲ ಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ:

(ಪ್ರಶ್ನೆ ಸಂಖ್ಯೆ 38ರ ಬದಲಿಗೆ)

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳನ್ನು ವಿವರಿಸಿ.

ಉತ್ತರ: ನೀರಾವರಿ ಸೌಲಭ್ಯವನ್ನು ಒದಗಿಸುವುದು

- ಜಲ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು
- ನದಿಗಳ ಪ್ರವಾಹವನ್ನು ನಿಯಂತ್ರಿಸುವುದು
- ನೌಕಾಯಾನದ ಸೌಲಭ್ಯವನ್ನು ಒದಗಿಸುವುದು
- ಗೃಹಬಳಕೆ ಹಾಗೂ ಕೈಗಾರಿಕೆಗಳಿಗೆ ನೀರನ್ನು ಒದಗಿಸುವುದು
- ಮಣ್ಣಿನ ಸವಕಳಿಯ ನಿಯಂತ್ರಣ
- ಮೀನುಗಾರಿಕೆಯ ಅಭಿವೃದ್ಧಿ ಮಾಡುವುದು
- ಅರಣ್ಯ ಸಂಪತ್ತನ್ನು ವೃದ್ಧಿಸುವುದು

ಅಥವಾ

ಹಿಮಾಲಯ ಪರ್ವತಗಳ ಅನುಕೂಲಗಳನ್ನು ವಿವರಿಸಿ.

ಉತ್ತರ: ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತವೆ

- ಉತ್ತರ ಏಷ್ಯಾದಿಂದ ಬೀಸುವ ಶೀತಗಾಳಿಗಳನ್ನು ತಡೆಯುತ್ತವೆ
- ನದಿಗಳ ಉಗಮ ಪ್ರದೇಶವಾಗಿವೆ
- ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿವೆ
- ವಿಶಾಲವಾದ ಮೈದಾನಗಳನ್ನು ನಿರ್ಮಿಸಿವೆ
- ಖನಿಜ ಸಂಪನ್ಮೂಲಗಳನ್ನು ಹೊಂದಿವೆ
- ಪ್ರವಾಸೋದ್ಯಮ ಮತ್ತು ಧಾರ್ಮಿಕ ಕೇಂದ್ರಗಳಿಗೆ ಪ್ರಸಿದ್ಧಿಯಾಗಿವೆ
- ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಕುಲಗಳಿಗೆ ಆಶ್ರಯತಾಣವಾಗಿವೆ 5x1=5